3. ಮತ್ತು ಸದರೀ ರೆಗ್ಯುಲೇಷನಿನ 15ನೇ ಸೆಕ್ಷನ್ನಿಂದ ತಮಗೆ ಇರುವ ಅಧಿಕಾರವನ್ನು ಅನುಸರಿಸಿ ಮೈಸೂರ ಸರ್ಕಾರದವರು, ಸದರೀ ರೆಗ್ಯುಲೇಷನಿನ 10, 11, 12, 13 ಅಥವಾ 14ನೇ ಸೆಕ್ಷನ್‌ಗಳಂತೆ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರರು ಮಾಡಿದ ಹುಕುಂಗಳ ಮೇಲಣ ಅಪೀಲ್ಗಳನ್ನು ಹಿಡಿಯತಕ್ಕ ರವಿನ್ಯೂ ಇಲಾಖೆಯ ಆಫಿಸರರಾಗಿರಬೇಕೆಂದು ತತ್ತಾಲದ ಕಡೂರು ಡಿಸ್ಟ್ರಿಕ್ಟಿನ ಡೆಪ್ಯೂಟಿ ಕಮಿಷನರನ್ನು ಮೊಕರರ್ರಾಡಿರುತ್ತಾರೆ.

ತಾರೀಖು 23ನೇ ಏಪ್ರೆಲ್ 1903.

ನಂ. 650—6490, ಸ್ಯ 1901ನೇ ಆಗಸ್ಟ್ 24ನೇ ಮಾರ್ಕ್ಹಂ 161—851ನೇ ನಂಬರ್ ಇಸ್ತಿಹಾರ್ನಾಮೆಗೆ ಬದಲಾಗಿ ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಮೈಸೂರು, ಬೆಂಗಳೂರು, ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿರುವ ಡಿಸ್ಟ್ರಿಕ್ಟು ಫಾರೆಸ್ಟುಗಳಿಂದ ತೆಗೆದುಕೊಂಡು ಹೋಗುವ ಸಾದೆಯ ತಲೆಹೊರೆ 1ಕ್ಕೆ 3 ಪೈ ನಂತೆ ಕೊಡುವ ಸೀನಿಯೋರೇಜ್‌ಯಾನೆ ತೀರ್ವೆಯು ಕೂಡ್ಲೆ ಮನ್ನಾ ಮಾಡಲ್ಪಡುವದು.

ಹುಕುಂ ಬಮೋಜೀಬ್,
ಎಂ. ಮುತ್ತಣ್ಣ,
ಫಾರೆಸ್ಟ್ ಇಲಾಖೆಯ ಗವರ್ನ್‌ಮೆಂಟ್ ಆಫೀಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮಾ.

ತಾರೀಖು 20ನೇ ಏಪ್ರೆಲ್ 1903, ಉದಕಮಂಡಲ.

ಕ್ಯಾಂಪ್ ನಂ. 3—45, ಮಾರೀಕಣಿವೆ ಡಿವೀಜನಿಗೆ ಸೇರಿದ ಸಬ್ ಅಸಿಸ್ಟೆಂಟ್ ಇಂಜನಿಯರ್ ಮೆ|| ಕೆ. ಆರ್. ಶೇಷಾಚಾರ್, ಬಿ. ಎ., ಬಿ. ಇ., ಯವರಿಗೆ ಮಾಹೆ ಮಜಕೂರು 28ನೇ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 22ನೇ ಏಪ್ರೆಲ್ 1903.

ಕ್ಯಾಂಪ್ ನಂ. 8—69, ಚಿತ್ರದುರ್ಗ ಡಿವೀಜನಿಗೆ ಸೇರಿದ ಅಸಿಸ್ಟೆಂಟ್ ಇಂಜಿನಿಯರ್ ಮೆ|| ಕೆ. ಪೊಪಾತ್ ಭೈರ್ದಗರಸ್ಕಿ, ಎಲ್. ಸಿ. ಇ., ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಮೂರುತಿಂಗಳುಗಳ ಖಾಯಿಲೇ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,
ಡಬ್ಲ್ಯೂ. ಮೆಕ್‌ಹಟ್ಚೀ,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರ ಗವರ್ನ್‌ಮೆಂಟ್ ಸೆಕ್ರೆಟರಿ.